## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು–ಮಡಿಕೇರಿ

## CRL.A No.127/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಸೋಮಶೇಖರ್** | **PW – 1** |
| ತಂದೆಯ ಹೆಸರು | : | **ಸುಬ್ಬೇಗೌಡ** | |
| ವಯಸ್ಸು | : | **42 ವರ್ಷ** | |
| ವೃತ್ತಿ | : | **ಚಾಲಕ** | |
| ವಾಸ | : | **ಗುಂಡ್ಲುಪೇಟೆ ನಗರ ಮತ್ತು ತಾಲೂಕು, ಚಾಮರಾಜನಗರ ಜಿಲ್ಲೆ,** | |

**ಸಾಕ್ಷಿಯನ್ನು ದಿನಾಂಕ 04–02–2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**(Evidence on IA under section 5 of Limitation Act)**

**ಮುಖ್ಯ ವಿಚಾರಣೆ: ಅಪೀಲುದಾರರ ಪರ ವಕೀಲರಾದ ಶ್ರೀಮತಿ ಕೆ.ಎಂ.ಎಂ. ರವರಿಂದಃ**

1. ನಾನು ಮಡಿಕೇರಿಯ ಅರಣ್ಯ ಅಧಿಕಾರಿಯ ಮುಂದೆ ವಾಹನವನ್ನು ಮಧ್ಯಂತರ ಆದೇಶ ಮಾಡಿ ನನ್ನ ವಶಕ್ಕೆ ಕೊಡುವಂತೆ ಮಧ್ಯಂತರ ಅರ್ಜಿ ಸಲ್ಲಿಸಿದೆನು. ಸದರಿ ಅರ್ಜಿಯ ಮೇಲೆ ಅರಣ್ಯ ಅಧಿಕಾರಿಗಳು ದಿನಾಂಕ 20.04.2025 ರಂದು ಆದೇಶ ಮಾಡಿದರು. ಸದರಿ ಆದೇಶ ಆದ ನಂತರ ನ್ಯಾಯಾಲಯದ ಮುಂದೆ ಅಪೀಲು ಸಲ್ಲಿಸಲು 179 ದಿವಸ ತಡವಾಗಿರುತ್ತದೆ. ನನಗೆ ನನ್ನ ಅರ್ಜಿ ವಜಾ ಆದ ಬಗ್ಗೆ ಮಾಹಿತಿ ಇರಲಿಲ್ಲ ಹಾಗೂ ನನಗೆ ಆರೋಗ್ಯ ಸರಿ ಇಲ್ಲದ ಕಾರಣ 179 ದಿವಸ ತಡವಾಗಿ ಅರ್ಜಿ ಸಲ್ಲಿಸಿರುತ್ತೇನೆ. ತಡವಾಗಿ ಸಲ್ಲಿಸಿದ ಅರ್ಜಿಯನ್ನು ಮನ್ನಿಸಿ ನನ್ನ

ಅರ್ಜಿಯನ್ನು ಮಾನ್ಯ (Allow) ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು- ಸರ್ಕಾರಿ ಅಭಿಯೋಜಕರಿಂದಃ**

1. ನಿಮ್ಮ ಅರ್ಜಿಯಲ್ಲಿ ನಿಮಗೆ ಆರೋಗ್ಯ ಸರಿ ಇಲ್ಲ ಎಂದು ತಿಳಿಸಲು ತೊಂದರೆ ಇತ್ತಾ ಎಂದು ಕೇಳಿದಕ್ಕೆ ಸಾಕ್ಷಿ ನನಗೆ ಆರೋಗ್ಯ ಸರಿ ಇರಲಿಲ್ಲ ಎಂದು ಹೇಳುತ್ತಾರೆ. ನನ್ನ ಅರ್ಜಿ ವಜಾ ಆದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಕಾರಣ ಇಲ್ಲದೆ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.